4810(5415) ಶ್ರೀ ಕಿರಣ್ ಕುಮಾರ್ ಕೆ.ಎಸ್.(ಕಳ್ಳಂಬೆಳ್ಳ): ಮಾನ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯ್ತಿಯವರು ಮನೆ ಕಂದಾಯ ವಸೂಲು ಮಾಡಲು ಅನುಸರಿಸುವ ಮಾನದಂಡವೇನು?

ಆ) ಗ್ರಾಮೀಣ ಪ್ರದೇಶದಲ್ಲಿ ಮನೆ ಕಂದಾಯವನ್ನು ನಗರ ಪ್ರದೇಶದ ರೀತಿಯಲ್ಲಿ ವಸೂಲು ಮಾಡುತ್ತಿರುವುದು ನಿಜವೇ?

ಇ) ಇದರಿಂದ ಗ್ರಾಮೀಣ ಪ್ರದೇಶದ ಜನತೆಗೆ ಅನಾನುಕೂಲ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಮನೆ ಕಂದಾಯಕ್ಕೂ ಮತ್ತು ನಿವೇಶನಕ್ಕೂ ಯಾವ ರೀತಿಯ ಕಂದಾಯವನ್ನು ವಸೂಲು ಮಾಡಬೇಕೆಂಬ ಬಗ್ಗೆ ಮಾರ್ಗಸೂಚಿಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ. ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಗ್ರಾಮ ಪಂಚಾಯ್ತಿಗಳು ತಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸಲು ತಮ್ಮ ಆರ್ಥಿಕ ಸಂಪನ್ಮೂಲವನ್ನು ಬಲಪಡಿಸುವ ನಿಟ್ಟಿನಲ್ಲಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಅನುಸೂಚಿ 4 ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿ ತೆರಿಗೆ ಮತ್ತು ಫೀಜುಗಳು ನಿಯಮ 94ರ ಅಧ್ಯಾಯ 3ರ ನಿಯಮ 5ರಲ್ಲಿ ಗ್ರಾಮೀಣ ಪ್ರದೇಶದ ಕಟ್ಟಡಗಳ ಮೇಲೆ ವಾರ್ಷಿಕ ಬಾಡಿಗೆ ಮೌಲ್ಯದ ಶೇಕಡಾ 10ರಷ್ಟು ಗರಿಷ್ಠ ತೆರಿಗೆಯನ್ನು ವಿಧಿಸಬಹುದೆಂದು ನಿರೂಪಿಸಲಾಗಿದೆ.

ವಾರ್ಷಿಕ ಬಾಡಿಗೆ ಮೌಲ್ಯ ನಿರ್ಧರಿಸುವ ಸಮಯದಲ್ಲಿ ಕಟ್ಟಡದ ವಿಸ್ತೀರ್ಣ, ನಿರ್ಮಾಣದ ಮಾದರಿ, ಇರುವ ಸ್ಥಳ ಇವುಗಳನ್ನಲ್ಲದೆ ಸಮಿತಿಯು ಒಪ್ಪಬಹುದಾದ ಇನ್ನಿತರ ಯಾವುದೇ ಪಾರದರ್ಶಕ ಮಾನದಂಡವನ್ನು ಉಪಯೋಗಿಸಿ ಒಂದು ನಿರ್ಧಾರಕ್ಕೆ ಬಂದು ಪ್ರತಿಯೊಂದು ವರ್ಗಗಳ ಕಟ್ಟಡಕ್ಕೆ ಸಂಬಂಧಿಸಿದಂತೆ ಗರಿಷ್ಟ ಹಾಗೂ ಕನಿಷ್ಟ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಿರ್ಧರಿಸಬೇಕಾಗಿರುತ್ತದೆ. ಈ ಸಮಿತಿಯ ರಚನೆ ಕೆಳಕಂಡಂತಿರುತ್ತದೆ.

1.	ಸಂಬಂಧಿಸಿದ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	ಅಧ್ಯಕ್ಷರು
2.	ಗ್ರಾಮಪಂಚಾಯ್ತಿಗೆ ಸಂಬಂಧಿಸಿದ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು	ಸದಸ್ಯರು
3.	ಸಂಬಂಧಿಸಿದ ಗ್ರಾಮಪಂಚಾಯ್ತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು	ಸದಸ್ಯರು
4.	ಸಂಬಂಧಿಸಿದ ಗ್ರಾಮಪಂಚಾಯ್ತಿಯ ಕಾರ್ಯದರ್ಶಿ	ಸದಸ್ಯರು
5.	ಸಂಬಂಧಿಸಿದ ತಾ.ಪಂಚಾಯ್ತಿಯ ಕಾರ್ಯನಿರ್ವಾಹಕ ಅಧಿಕಾರಿಗಳು	ಸದಸ್ಯರು ಕಾರ್ಯದರ್ಶಿ

ಸಮಿತಿಯ ಶಿಫಾರಸ್ಸನ್ನು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಯು ಗ್ರಾಮಪಂಚಾಯ್ತಿಗೆ ತಿಳಿಸುವರು. ಗ್ರಾಮ ಪಂಚಾಯ್ತಿಯು ತಾನು ವಿಧಿಸುವ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಿರ್ಣಯದ ಮೂಲಕ ನಿರ್ಧರಿಸುತ್ತದೆ.

ಆ) ಗ್ರಾಮ ಪಂಚಾಯತಿಗಳು ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಕರ ವಸೂಲಿ ಮಾಡುತ್ತಾರೆ.

ಇ) ನಾಗರೀಕ ಸಮಾಜದಲ್ಲಿ ತೆರಿಗೆ ಅನಿವಾರ್ಯ.

ಈ) ಈಗಾಗಲೇ ಮಾರ್ಗಸೂಚಿ ಹೊರಡಿಸಲಾಗಿದೆ. ಸುತ್ತೋಲೆ ಸಂಖ್ಯೆ: ಗ್ರಾಅಪ 380 ಗ್ರಾಪಂಅ 2002, ದಿನಾಂಕ: 24-5-2003.

4811 (5648) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್): ಮಾನ್ಯ, ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯ, ನಂದಿಕೂರು ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ನಾಗಾರ್ಜುನ ಉಷ್ಣವಿದ್ಯುತ್ ಸ್ಥಾವರ ಯೋಜನೆಯ ವಿವರಗಳೇನು;

ಆ) ಈ ಯೋಜನೆಯ ಮೂಲಕ ಉತ್ಪಾದಿಸಲಾಗುವ ವಿದ್ಯುತ್‌ನ ಪ್ರಮಾಣ ಎಷ್ಟು ಹಾಗೂ ಸ್ಥಾವರಕ್ಕಾಗಿ ಬಂಡವಾಳ ಹೂಡಿಕೆಯ ಮೊತ್ತ ಎಷ್ಟು;